**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಕೇಸ್ ನಂ.123/2024**

ಪ್ರಾ.ಸಾ. 3

ಚಾ.ಸಾ. 12

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 09.09.2025**

| | |
|---|---|
| ಸಾಕ್ಷಿದಾರರ ಹೆಸರು | ವೆಂಕಟೇಶ |
| ತಂದೆಯ ಹೆಸರು | ಬೋರಯ್ಯ |
| ವಯಸ್ಸು | 36 ವರ್ಷ |
| ಉದ್ಯೋಗ | ಬಾರ್ ನಲ್ಲಿ ಕೆಲಸ |
| ವಾಸ | ವಡ್ಡರಾಳು ಗ್ರಾಮ |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1. ಪ್ರಕರಣ 3 ನೇ ಆರೋಪಿ ಧನರಾಜ್ ಗೊತ್ತು. ಅವರು ನನ್ನ ಜೊತೆ ಮೈಸೂರಿನಲ್ಲಿ ಬಾರಿನಲ್ಲಿ ಕೆಲಸ ಮಾಡುತ್ತಿದ್ದರು. ಅಲ್ಲದೇ ಪ್ರಕರಣ ಉಳಿದ ಆರೋಪಿಗಳಾದ ಅಭಿ, ಹನುಮಂತ ಮತ್ತು ವಿಕಾಸ್ ಗೊತ್ತು. ಸುಮಾರು 4 ವರ್ಷಗಳ ಹಿಂದೆ ಅವರು ಮೈಸೂರು ತ್ರಿನೇತ್ರ ಬಾರ್ ಬಳಿ ಬಂದಿದ್ದರು. ಅವರು ಆ ದಿನ ಬಾರಿನ ಮೇಲಗಡೆ ಇರುವ ಕೋಣೆಯಲ್ಲಿ ಉಳಿದುಕೊಂಡರು, ಆಮೇಲೆ ಅವರು ಎಲ್ಲಿ ಹೋದರು ನನಗೆ ಗೊತ್ತಿಲ್ಲ. ಒಂದು ವಾರದ ಬಳಿಕ ಪೊಲೀಸರು 1 ರಿಂದ 4 ನೇ ಆರೋಪಿಗಳನ್ನು ಸದರಿ ಬಾರ್ ಬಳಿ ಕರೆದುಕೊಂಡು ಬಂದಿದ್ದರು. ಬಾರಿನ ಮೇಲುಗಡೆ ಸದರಿ ಆರೋಪಿಗಳು ಉಳಿದುಕೊಂಡಿದ್ದ ರೂಮನ್ನು ಪರಿಶೀಲಿಸಿದರು. ಅಲ್ಲಿ ಪೊಲೀಸರು ಟವಿಲ್ ತರಹದ ಬಟ್ಟೆಗಳನ್ನು ಅಮಾನತ್ತುಪಡಿಸಿದರು. 1 ರಿಂದ 4 ನೇ ಆರೋಪಿಗಳು ಆ ಬಟ್ಟೆಗಳನ್ನು ಪೊಲೀಸರಿಗೆ ತೋರಿಸಿದರು. ಆ ಬಟ್ಟೆಗಳಲ್ಲಿ ರಕ್ತ ಇತ್ತು. ಆ ಬಟ್ಟೆಗಳನ್ನು ಪೊಲೀಸರು ತೆಗೆದು

ಕೊಂಡು ಹೋದರು. ಪೊಲೀಸರು ಯಾಕೆ ಬಂದಿದ್ದರು ಎಂದು ಗೊತ್ತಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಮಾಡಿಕೊಂಡಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಾಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಭಾಗಾಶಃ ಪ್ರತಿಕೂಲ ಸಾಕ್ಷಿಯನ್ನಾಗಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಗಿದೆ.)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

*2.* ದಿನಾಂಕ *28.06.2019* ರಂದು *1* ರಿಂದ *4* ನೇ ಆರೋಪಿಗಳ ಮೈಸೂರಿನ ನಾನು ಕೆಲಸ ಮಾಡುತ್ತಿದ್ದ ತ್ರಿನೇತ್ರ ಬಾರಿಗೆ ಬಂದು ಬಾರಿನ ಮೇಲ್ಗಡೆ ಇದ್ದ ರೂಮಿನಲ್ಲಿ ರಾತ್ರಿ ಉಳಿದುಕೊಂಡಿದ್ದರು ಎಂದರೆ ಸರಿ. ದಿನಾಂಕ *01.07.2019* ರಂದು ಬೆಳಗ್ಗೆ *1* ರಿಂದ *4* ನೇ ಆರೋಪಿಗಳು ತಾವು ತಂದಿದ್ದ ಪಲ್ಸರ್ ಮೋಟಾರು ಬೈಕ್ ಮತ್ತು ಡಿಯೋ ಸ್ಕೂಟರ್ ನಲ್ಲಿ ತಿರುಪತಿಗೆ ಹೋಗುತ್ತೇವೆ ಎಂದು ಹೇಳಿ ಹೊರಟು ಹೋದರು ಎಂದರೆ ನನಗೆ ಗೊತ್ತಿಲ್ಲ.

*3.* ದಿನಾಂಕ *06.07.2019* ರಂದು ಮದ್ಯಾಹ್ನ *1.30* ಗಂಟೆ ಸಮಯಕ್ಕೆ ಮದ್ದೂರಿನ ವೃತ್ತ ನಿರೀಕ್ಷಕರು *1* ರಿಂದ *4* ನೇ ಆರೋಪಿಗಳನ್ನು ನಮ್ಮ ಬಾರ್ ಬಳಿ ಕರೆದುಕೊಂಡು ಬಂದರು ಎಂದರೆ ಸರಿ. ಅಲ್ಲಿ ಆರೋಪಿಗಳು ವೃತ್ತ ನಿರೀಕ್ಷಕರಿಗೆ ತಾವು ಕೊಲೆ ಮಾಡುವ ಸಮಯದಲ್ಲಿ ಧರಿಸಿದ್ದ ಬಟ್ಟೆಗಳನ್ನು ಮೇಲ್ಗಡೆ ರೂಮಿನಲ್ಲಿ ಇಟ್ಟಿದ್ದೇವೆ ಎಂದು ಹೇಳಿದರು ಎಂದರೆ ಗೊತ್ತಿಲ್ಲ. ಅಲ್ಲಿ ಆರೋಪಿಗಳೇ ವೃತ್ತ ನಿರೀಕ್ಷಕರನ್ನು, ನನ್ನನ್ನು ಮತ್ತು ಮಹಜರು ಸಾಕ್ಷಿಗಳನ್ನು ಮೇಲ್ಗಡೆ ರೂಮಿಗೆ ಕರೆದುಕೊಂಡು ಹೋದರು ಎಂದರೆ ಸರಿ. ಅಲ್ಲಿ ಆರೋಪಿಗಳು ತಾವು ರೂಮಿನಲ್ಲಿ ಇಟ್ಟಿದ್ದ ಬನಿಯನ್, ಟೀ ಶರ್ಟ್, ಪ್ಯಾಂಟು ಮತ್ತು ಶರ್ಟ್ ಗಳನ್ನು ಪೊಲೀಸರಿಗೆ ತೋರಿಸಿದರು ಎಂದರೆ ಸರಿ. ಪೊಲೀಸರು ಆ ಬಟ್ಟೆಗಳನ್ನು ಪ್ಯಾಕ್ ಮಾಡಿ ಮೊಹರು ಮಾಡಿದರು ಎಂದರೆ ಸರಿ. ಆ ಸಮಯದಲ್ಲಿ ನಾನು ಹಾಜರು ಇದ್ದು ವಿಚಾರ ತಿಳಿದುಕೊಂಡೆ ಎಂದರೆ ಸರಿ. ನಂತರ ವಿಚಾರ ತಿಳಿಯಲಾಗಿ ಪ್ರಕರಣದ ಎಲ್ಲಾ ಆರೋಪಿಗಳು ಸೇರಿಕೊಂಡು ಮೃತ ರಾಕೇಶ್‌ನನ್ನು ಹೊಡೆದು ಕೊಲೆ ಮಾಡಿದ್ದಾರೆ ಮತ್ತು ಅವನ ಸ್ನೇಹಿತರಾದ ಕರಿಯ ಮತ್ತು ಇತರರನ್ನು ಹೊಡೆದು ಹಲ್ಲೆ

ಮಾಡಿದ್ದಾರೆ ಎಂದು ಗೊತ್ತಾಯಿತು ಎಂದರೆ ಸರಿ. ಕೊಲೆ ಮಾಡಿದ ನಂತರ ಅವರು ನಮ್ಮ ಬಾರಿನ ಮಹಡಿಯ ರೂಮಿನಲ್ಲಿ ಉಳಿದುಕೊಂಡಿದ್ದರು ಎಂಬ ವಿಚಾರ ತಿಳಿಯಿತು ಎಂದರೆ ಸರಿ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡರು ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ಆರೋಪಿ ಪರ ವಕೀಲರು ಗೈರು ಹಾಜರು, ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ಯಾದವ ಕೆ.)

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.